ಆ) ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳು - 5 ಸರ್ಕಾರಿ ಸ್ವತಂತ್ರ ಪದವಿ ಪೂರ್ವ ಕಾಲೇಜುಗಳಿಲ್ಲ.

ಇ) ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಸ್ಥಳಾವಕಾಶದ ಅಗತ್ಯತೆ ಇರುವಲ್ಲಿ ಅಯವ್ಯಯದ ಲಭ್ಯತೆಗೆ ಒಳಪಟ್ಟು ಹೆಚ್ಚಿವರಿ ಕೊಠಡಿಗಳನ್ನು ಹಂತ ಹಂತವಾಗಿ ನಿರ್ಮಾಣ ಮಾಡಲಾಗುವುದು.

ಶ್ರೀ ಎಸ್. ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಸಭಾಧ್ಯಕ್ಷರೆ, ನನ್ನ ಪ್ರಶ್ನೆ ಬಂದು ಈ ಜ್ಯೂನಿಯರ್ ಕಾಲೇಜುಗಳಿಗೆ ಕಟ್ಟಡವನ್ನು ಕೊಡತಕ್ಕದ್ದು, ಸಂಯುಕ್ತ ಪದವಿ ಪೂರ್ವ ಕಾಲೇಜುಗಳಲ್ಲಿ ಅಂದರೆ ಹೈಸ್ಕೂಲ್‌ನಲ್ಲಿ ಕಟ್ಟಡಗಳು ಇರುತ್ತವೆ, ಅದರಲ್ಲೇ ಜ್ಯೂನಿಯರ್ ಕಾಲೇಜುಗಳ ಮಕ್ಕಳು ಓದುತ್ತಾರೆ. ಈಗ ಏನಾಗಿದೆ ಅಂದರೆ ಹೈಸ್ಕೂಲ್‌ಗೆ ಸರಿಯಾದ ಸಂಖ್ಯೆಯಲ್ಲಿ ಕಟ್ಟಡಗಳನ್ನು ಒದಗಿಸಲಿಕ್ಕೆ ಆಗುತ್ತಿಲ್ಲ, ಅದರಲ್ಲೂ ನೀವು ಕಾಲೇಜುಗಳಿಗೆ ಸ್ವಂತ ಕಟ್ಟಡಗಳನ್ನು ಕೊಡದೇ ಹೋದರೆ, ಇವತ್ತು ನೀವು ಏನು ಶಿಕ್ಷಣ ಗುಣಮಟ್ಟವನ್ನು ಸುಧಾರಿಸಬೇಕು ಎಂದು ಇದ್ದೀರಿ, ಅದರಲ್ಲಿ ಸ್ವಂತವಾದ ಕಟ್ಟಡವನ್ನು ಸಹ ಒದಗಿಸುವುದು ಒಂದು ಎಂದು ನಾನು ಭಾವಿಸಿದ್ದೇನೆ. ಇನ್ನು ಸರ್ಕಾರಿ ಪದವಿಪೂರ್ವ ಕಾಲೇಜುಗಳಿಗೆ ಸ್ಥಳಾವಕಾಶದ ಅಗತ್ಯತೆ ಇರುವಲ್ಲಿ ಆಯವ್ಯಯದ ಲಭ್ಯತೆಗೆ ಒಳಪಟ್ಟು ಹೆಚ್ಚುವರಿ ಕೊಠಡಿಗಳನ್ನು ಹಂತ ಹಂತವಾಗಿ ನಿರ್ಮಾಣ ಮಾಡಲಾಗುವುದು ಎಂದು ನಿಮ್ಮ ಉತ್ತರ ಏನಿದೆ, ಅದು ಅಷ್ಟು ಸಮಂಜಸವಾಗಿ ಕಾಣಲಿಲ್ಲ. ಆದುದರಿಂದ ದಯಮಾಡಿ ತಾವು, ನಿಮ್ಮ ಇಲಾಖೆಯ ಬಗ್ಗೆ ಈ ರೀತಿಯ ಒಂದು ಉತ್ತರವನ್ನು ಕೊಡದಲೇ ಎಲ್ಲೆಲ್ಲಿ ಕಟ್ಟಡಗಳನ್ನು ಒದಗಿಸುವ ಅವಶ್ಯಕತೆ ಇದೆ, ಅಲ್ಲಿಗೆ ಹೆಚ್ಚಿಗೆ ಅನುದಾನವನ್ನು ಕೊಟ್ಟು ಕಟ್ಟಡಗಳನ್ನು ಕಟ್ಟಿಸಿಕೊಡಬೇಕೆಂದು ನನ್ನ ಮನವಿ.

ಶ್ರೀ ಹೆಚ್. ಜಿ. ಗೋವಿಂದೇಗೌಡ : ಮಾನ್ಯ ಸಭಾಧ್ಯಕ್ಷರೆ, ಸಂಯುಕ್ತ ಪದವಿಪೂರ್ವ ಕಾಲೇಜುಗಳು ಹೈಸ್ಕೂಲ್‌ಗಳಿಗೆ ಅಟ್ಯಾಚ್ ಆಗಿರುತ್ತವೆ. ನಮ್ಮ ಮಾನ್ಯ ಶಾಸಕ ಮಿತ್ರರ ಕ್ಷೇತ್ರದಲ್ಲಿ ಇಂಡಿಪೆಂಡೆಂಟ್ ಕಾಲೇಜುಗಳು ಯಾವುವು ಇಲ್ಲ. ಈಗಾಗಲೇ ಕಟ್ಟಡಗಳನ್ನು ಒದಗಿಸಿದ್ದೇವೆ. ಅವಶ್ಯಕತೆ ಇದ್ದರೆ, ಖಂಡಿತ ಅದನ್ನು ಮಾಡಲೇಬೇಕಾಗುತ್ತದೆ. ನಾವಾಗಲೇ ಹೈಸ್ಕೂಲ್‌ಗಳಿಗೆ ಜಿಲ್ಲಾ ಪಂಚಾಯತಿ ಮೂಲಕ ಹಣ ಒದಗಿಸತಕ್ಕ ವ್ಯವಸ್ಥೆಯನ್ನು ಮಾಡಿದ್ದೇವೆ. ಇನ್ನೂ ಸಹ ಅಂತಹ ಅವಶ್ಯಕತೆ ಇದ್ದ ಕಡೆಯಲ್ಲೆಲ್ಲಾ ಹೈಸ್ಕೂಲ್ ಮತ್ತು ಸಂಯುಕ್ತ ಪದವಿಪೂರ್ವ ಕಾಲೇಜು ಮಾಡುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳುತ್ತದೆ.

ವಿಟ್ಲಾದಲ್ಲಿ ಪ್ರಥಮ ದರ್ಜೆ ಕಾಲೇಜಿಗೆ ಕಟ್ಟಡ

546 - ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಆ) *ವಿಟ್ಲ ಪ್ರಥಮ ದರ್ಜೆ ಕಾಲೇಜಿಗೆ ಸ್ವಂತ ಕಟ್ಟಡ ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಅ) 1997-98ನೇ ಸಾಲಿನಲ್ಲಿ ಕಟ್ಟಡಕ್ಕೆ ಎಷ್ಟು ಹಣ ಒದಗಿಸಲಾಗಿದೆ?

ಇ) ಹಾಗಿದ್ದಲ್ಲಿ ಒದಗಿಸಲಾದ ಹಣವೆಷ್ಟು?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಶಿಕ್ಷಣ ಸಚಿವರು) :

ಅ) ಬಂದಿದೆ.

ಆ) ರೂ. 20,000-00

ಇ) ಈ ಮೇಲಿನಂತೆ.

ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಸಚಿವರ ಉತ್ತರದಿಂದ ನಮಗೆ ಸಮಾಧಾನ ಆಗಿಲ್ಲ. ಏಕೆಂದರೆ, ಕೇವಲ 20 ಸಾವಿರ ರೂಪಾಯಿಗಳಿಂದ ಕಾಲೇಜು ಕಟ್ಟಲಿಕ್ಕೆ ಸಾಧ್ಯವಾಗುವುದಿಲ್ಲ. ಕಳೆದ ವರ್ಷ 1995-96 ಕ್ಕೆ ಎರಡು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರು. 1996-97ರಲ್ಲಿ 8 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದು ಅದನ್ನು ಖರ್ಚು ಮಾಡಿಲ್ಲ. ಅದರ ಬಗ್ಗೆ ಗಮನವನ್ನೇ ಕೊಟ್ಟಿಲ್ಲ. ಆದರೆ, ಕೇವಲ 20 ಸಾವಿರ ರೂಪಾಯಿಗಳಲ್ಲಿ ಕಟ್ಟಡ ಕಟ್ಟಲು ಸಾಧ್ಯವೇ? ನಮ್ಮ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚು. ಅಲ್ಲಿ ಬಾಡಿಗೆ ಕಟ್ಟಡದಲ್ಲಿ ಕಾಲೇಜುಗಳು ನಡೆಯುತ್ತಿವೆ. ಅಲ್ಲಿ ಕಟ್ಟಡ ಕಟ್ಟಲಿಕ್ಕೆ ಜಾಗವನ್ನು ಸಹಿತ ರಿಸರ್ವ್ ಮಾಡಿ ಇಟ್ಟಿದ್ದೇವೆ. ಆದರೂ ಸಹಿತ ತಾವು ಕಟ್ಟಡ ಕಟ್ಟುವುದರ ಬಗ್ಗೆ ಗಮನ ಕೊಡದೇ ಕೇವಲ 20 ಸವಿರ ರೂಪಾಯಿಗಳನ್ನು ಕೊಟ್ಟರೆ ಏನು ಮಾಡಲಿಕ್ಕೆ ಸಾಧ್ಯ? ಸನ್ಮಾನ್ಯ ಅಧ್ಯಕ್ಷರೆ, ಈ ವರ್ಷವಾದರೂ 20 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ (ಉನ್ನತ ಶಿಕ್ಷಣ ಸಚಿವರ ಪರವಾಗಿ) : ಮಾನ್ಯ ಸ್ನೇಹಿತರು ಹೇಳಿದಂಥ ಮಾತು ನಿಜ. ಬಡ್ಜೆಟ್‌ನಲ್ಲಿ 78 ಲಕ್ಷ ರೂಪಾಯಿಗಳನ್ನು ಎಸ್ಟಿಮೇಟ್ ಮಾಡಿ 20 ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ಇದರಿಂದ ಕೆಲಸ ಮಾಡುವುದಕ್ಕೆ ಕಷ್ಟ. ಇಲಾಖೆಯವರು ಒನ್‌ಥರ್ಡ್ ಅಮೌಂಟ್ ಇಡಲಿಲ್ಲ ಎಂದರೆ ಟೆಂಡರ್ ಕರೆಯುವುದಿಲ್ಲ ಮತ್ತು ಕೆಲಸವನ್ನು ಪ್ರಾರಂಭ ಮಾಡವುದಿಲ್ಲ. ಈ ಹಣ ತೀರಾ ಕಡಿಮೆ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದರ ಬಗ್ಗೆ ಏನು ಕಾರ್ಯಕ್ರಮಗಳನ್ನು ಕೈಗೊಳ್ಳಬಹುದು ಎಂದು ಇಲಾಖಾ ಅಧಿಕಾರಿಗಳನ್ನು ಕರೆಸಿ ಮಾತನಾಡುತ್ತೇನೆ. ನೋಟ್‌ನಲ್ಲಿ 24 ಲಕ್ಷ ರೂಪಾಯಿಗಳನ್ನು ಹೆಚ್ಚುವರಿ ಅನುದಾನ ನೀಡಲಿಕ್ಕೆ ಆಡಳಿತಾತ್ಮಕ ಅನುಮೋದನೆಗಾಗಿ, ಸರ್ಕಾರಕ್ಕೆ ಅಂದಾಜು ನಕ್ಷೆಯನ್ನು ಕಳುಹಿಸಲಾಗಿದೆ ಎಂದು ಇಲಾಖಾ ಅಧಿಕಾರಿಗಳು ಹೇಳಿದ್ದಾರೆ, ಅದು ಬರಬೇಕು. ಅದು ಆದಷ್ಟು ಬೇಗ ಬರುವ ಹಾಗೆ ಮಾಡಿ ಬಂದನಂತರ ಜಾಗ್ರತೆ ಕಾರ್ಯಕ್ರಮವನ್ನು ಕೈಗೊಳ್ಳುತ್ತೇನೆ.

ಡಾ||ಎಂ. ಪಿ. ಕರ್ಕಿ : ಕಾಲೇಜಿನ ಕಟ್ಟಡಕ್ಕೆ ಕೇವಲ 20 ಸಾವಿರ ರೂಪಾಯಿಗಳು ಎಂದರೆ ನನಗೆ ಆ ಫಿಗರ್ಸ್‌ನಲ್ಲಿ ಹೆಚ್ಚು ಕಡಿಮೆ ಆಗಿರಬಹುದು ಎಂದು ಅನುಮಾನ ಬರುತ್ತಿದೆ.

ಅಧ್ಯಕ್ಷರು : ನಾನು ಸದನದಲ್ಲಿ ಈ ಮಾತನ್ನು ಮೊದಲೇ ಹೇಳಿದ್ದೇನೆ ನಮ್ಮ ರಾಜ್ಯದಲ್ಲಿ ವಾಸ ಮಾಡತಕ್ಕ 99 ಭಾಗದ ಜನರು 33 ರೂಪಾಯಿಗಳನ್ನು ಹಂಚಿಕೊಳ್ಳುತ್ತಿದ್ದಾರೆ ಉಳಿದ ಒಂದು

ಪರ್ಸೆಂಟ್ ಜನ ಮಾತ್ರ 69 ರೂಪಾಯಿಗಳನ್ನು ಪಡೆಯುತ್ತಿದ್ದಾರೆ. ಈ ಒಂದು ಸಮಸ್ಯೆ ಎಲ್ಲಾ ವ್ಯವಸ್ಥೆಯಲ್ಲೂ ಆಗುತ್ತಿದೆ. ಈ ಅಧಿವೇಶನದ ಕೊನೆಯಲ್ಲಿ ಇದರ ಬಗ್ಗೆ ಮಾತನಾಡೋಣ.

ಶ್ರೀ ಬಿ. ಎಸ್. ಯಡಿಯೂರಪ್ಪ : ಇಲ್ಲಿ ಅಧಿಕಾರಿಗಳು ಯಾವ ರೀತಿ ಗೈಡ್ ಮಾಡುತ್ತಾರೋ ಯಾರಿಗೇ ಉತ್ತರವನ್ನು ಕೊಡುತ್ತಾರೋ ಗೊತ್ತಿಲ್ಲ. ಮಾನ್ಯ ಸಚಿವರು ಆಡಳಿತ ಮಂಜೂರಾತಿ ಸಿಕ್ಕಿದೆ ಎಂದು ಹೇಳಿದರು. ಕಳೆದ ಎರಡು ವರ್ಷದಿಂದ ಹಣ ಹೆಚ್ಚು ಇಟ್ಟಿದ್ದರು, ಈಗ ಒನ್‌ಥರ್ಡ್ ಇಟ್ಟು, ಕೆಲಸ ಶುರು ಮಾಡುತ್ತೇವೆ ಎಂದರೆ ಮುಗಿದು ಹೋಯ್ತು ಕಳೆದ ಮೂರು ವರ್ಷಗಳಿಂದ ಆಡಳಿತದ ಮಂಜೂರಾತಿ ಸಿಕ್ಕಿದೆ. ಕಳೆದ ವರ್ಷ ಲಕ್ಷಗಟ್ಟಲೆ, ಇಟ್ಟು ಈ ವರ್ಷ ಬರೀ 20 ಸಾವಿರ ರೂಪಾಯಿಗಳನ್ನು ಇಡುತ್ತೇವೆ ಎಂದರೆ ಕೆಲಸಾನೇ ಪ್ರಾರಂಭವಾಗುವುದಿಲ್ಲ. ಈಗಾಗಲೇ ಆರು ತಿಂಗಳು ಆಗಿ ಹೋಯ್ತು, ಇನ್ನು ಉಳಿದ ಆರು ತಿಂಗಳಲ್ಲಿ ಆಡಳಿತ ಮಂಜೂರಾತಿ ಪಡೆದು ಕೆಲಸ ಪ್ರಾರಂಭ ಮಾಡುವುದು ಯಾವಾಗ?

ಶ್ರೀ ಹೆಚ್. ಜಿ. ಗೋವಿಂದೇಗೌಡ : ನನಗೂ ಗೊತ್ತಿದೆ, ಮತ್ತು ಎಲ್ಲರಿಗೂ ಗೊತ್ತಿದೆ. ಇದರ ಬಗ್ಗೆ ಅಧಿಕಾರಿಗಳು ಈ ಹಣ ಇಟ್ಟಿರತಕ್ಕಂಥದ್ದು ಬಹಳ ಕಡಿಮೆ ಆಗಿದೆ. ಇನ್ನು ಒನ್‌ಥರ್ಡ್ ಪ್ರೊವೈಡ್ ಮಾಡಬೇಕು ಎಂದು ಹೇಳಿ ಆಡಳಿತಾತ್ಮಕ ಮಂಜೂರಾತಿಗಾಗಿ ಕಳುಹಿಸಿಕೊಟ್ಟಿದ್ದಾರೆ. ನಾನು ಸಹ ಅವರಿಗೆ ಹೇಳಿಬಿಟ್ಟು ಆದಷ್ಟು ಜಾಗ್ರತೆ, ಹಣ ಒದಗಿಸಲಿಕ್ಕೆ ಹೇಳುತ್ತೇನೆ. ಹಣ ಒದಗಿಸುವುದು ಸ್ವಲ್ಪ ಕಷ್ಟ ಆಗಿದೆ.

ಜಗಳೂರು ತಾಲ್ಲೂಕಿನಲ್ಲಿ ಕಾಡು ಪ್ರಾಣಿಗಳ ಹಾವಳಿ

547 - ಶ್ರೀ ಎಂ. ಬಸಪ್ಪ (ಜಗಳೂರು) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಜಗಳೂರು ತಾಲ್ಲೂಕಿನಲ್ಲಿ ಕಾಡುಪ್ರಾಣಿಗಳ ಹಾವಳಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

3) ಪರಿಹಾರಕ್ಕಾಗಿ ಬಂದಿರುವ ಅರ್ಜಿಗಳು ಎಷ್ಟು? (ಈ ಪೈಕಿ ಇತ್ಯರ್ಥಗೊಂಡ ಅರ್ಜಿಗಳೆಷ್ಟು?)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು) :

1) ಹೌದು.

2) ಕಾಡುಪ್ರಾಣಿಗಳು ಆದಷ್ಟು ಕಾಡನ್ನು ಬಿಟ್ಟು ಬರದಂತೆ ನೈಸರ್ಗಿಕ ಕಾಡು ಉಳಿಸಿ, ಬೆಳೆಸಿ ಕಾಡು ಪ್ರಾಣಿಗಳಿಗೆ ಬೇಕಾದ ಆಹಾರವನ್ನು ಅಲ್ಲಿಯೇ ದೊರಕುವಂತೆ ಮಾಡಲಾಗುತ್ತದೆ. ಒಂದು ವೇಳೆ ಅಲ್ಲಿಗೂ ಮೀರಿ ಅವು ಊರಿನ ಒಳಗಡೆ ಒಂದು ಮನುಷ್ಯರನ್ನು ಕೊಂದರೆ ಅಥವಾ ಗಾಯಗೊಳಿಸಿದರೆ, ಅಥವಾ ದನಕರುಗಳನ್ನು ಅಥವಾ ಸಾಕುಪ್ರಾಣಿಗಳನ್ನು ಹಿಡಿದು ಸಾಯಿಸಿದರೆ ಸರ್ಕಾರದ ಆದೇಶದಂತೆ